

ರಾಜಸ್ಥಾನದ ರಣಥಂಭೋರ್ ರಾಷ್ಟ್ರೀಯ ಉದ್ಯಾನವನದಲ್ಲಿ ಹುಲಿಗಳ ಕಾದಾಟ..

ಸರ್ಕಾರ 'ರಾಷ್ಟ್ರೀಯ ಪ್ರಾಣಿ' ಎಂದು ಘೋಷಿಸಿದೆ. ಹುಲಿಗಳು ಸಹ ಗಾಂಭೀರ್ಯದಿಂದ ಓಡಾಡುವುದನ್ನು ನೋಡಿದರೆ ಇದನ್ನು 'ರಾಜಾಧಿರಾಜ' ಎನ್ನಬಹುದು. ಹುಲಿಗಳನ್ನು ನೋಡಲೆಂದೇ ಪ್ರವಾಸಿಗರ ದಂಡು ಕಾಡುಗಳಿಗೆ ಹರಿದು ಬರುತ್ತದೆ.

ನಾನು ನೋಡಿದ ಎರಡು ದೃಶ್ಯಗಳು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ರಾಜಸ್ಥಾನದ ರಣಥಂಭೋರ್ ರಾಷ್ಟ್ರೀಯ ಉದ್ಯಾನವನದಲ್ಲಿ ಎರಡು ಹುಲಿಗಳ ಕಾದಾಟ ಅತ್ಯಂತ ಮನೋಹರ ಹಾಗೂ ಭಯ ಹುಟ್ಟಿಸುವ ಕಾದಾಟವಾಗಿತ್ತು. ಬೇರೆಯೇ ವ್ಯಾಪ್ತಿಯ ಪ್ರದೇಶದಿಂದ ಬಂದ ಹುಲಿಗಳನ್ನು ತಮ್ಮ ಪ್ರದೇಶದ ವ್ಯಾಪ್ತಿಯೊಳಗೆ ಸಾಧಾರಣವಾಗಿ ಹುಲಿಗಳು ಬಿಟ್ಟುಕೊಳ್ಳುವುದಿಲ್ಲ. ಆದರೆ ಈ ಪ್ರಕರಣದಲ್ಲಿ ಒಂದು ಭಾರಿ ಗಾತ್ರದ ಗಂಡು ಹುಲಿ ಹೆಣ್ಣು ಹುಲಿಯನ್ನು ಅರಸಿ ಬಂದಿತ್ತು. ಆ ಪ್ರದೇಶದಲ್ಲಿದ್ದ ಹೆಣ್ಣು ಹುಲಿ ಮರಿ ಹಾಕಿತ್ತು.

ಸಾಮಾನ್ಯವಾಗಿ ಹೆಣ್ಣು ಹುಲಿಗಳು ಸಣ್ಣ ಮರಿಯಿದ್ದಾಗ ಗಂಡಿನೊಡನೆ ಮಿಲನ ಹೊಂದಲು ಇಷ್ಟಪಡುವುದಿಲ್ಲ. ಕೆಲವು ಬಾರಿ ಗಂಡು ಹುಲಿಗಳು ಮರಿಯನ್ನು ಕೊಂದು ಹೆಣ್ಣಿನೊಡನೆ ಕೂಡುತ್ತವೆ. ಈ ಕಾರಣದಿಂದ ಹೆಣ್ಣು ಹುಲಿ ಗಂಡಿನೊಡನೆ ವಿರೋಧ ವ್ಯಕ್ತಪಡಿಸುತ್ತದೆ. ಇಲ್ಲಿಯೂ ಸಹ ಕೆಲವು ನಿಮಿಷಗಳ ಕಾಲ ಹೆಣ್ಣು ಗಂಡಿನೊಡನೆ ಹೋರಾಡಿ ಕೊನೆಗೆ ಸೋಲು ಒಪ್ಪಿಕೊಂಡಿತು. ಗಂಡು ಸ್ವಲ್ಪ ಸಮಯ ಕಾದು ಹೋರಾಟದಲ್ಲಿ ಮೇಲುಗೈ ಸಾಧಿಸಿದ್ದರೂ ಹೆಣ್ಣು ಹುಲಿಯನ್ನು ಬಿಟ್ಟು ಹೊರಟುಹೋಯಿತು. ಅವು ಹೋರಾಡಿದ ವಿವಿಧ ಭಂಗಿಗಳನ್ನು ನೋಡಿದರೆ ಗಾಬರಿ ಹುಟ್ಟಿಸುವಂತಿತ್ತು. ಆ ಕ್ಷಣದಲ್ಲಿ ಸಾಧ್ಯವಾದಷ್ಟು ಚಿತ್ರಗಳನ್ನು ಕ್ಲಿಕ್ಕಿಸಿದೆ. ಇದೊಂದು ಅತ್ಯಂತ ಕ್ಲಿಷ್ಟವಾದ ಹುಲಿಯ ಚಿತ್ರಣವಾಗಿತ್ತು.

ಮತ್ತೊಂದು ಪ್ರಕರಣದಲ್ಲಿ ಹುಲಿಯು ಕೊಂದ ಜಿಂಕೆಯನ್ನು ಎಳೆದುಕೊಂಡು ಹೋಗುವ ದೃಶ್ಯ. ಈ ಪ್ರಕರಣದಲ್ಲಿ ಹುಲಿಯು ತನ್ನ ಮರಿಗಳನ್ನು ದೂರದಲ್ಲೆಲ್ಲೋ ಬಿಟ್ಟು ಬೇಟೆಗಾಗಿ ಬಂದಿತ್ತು. ಒಂದು ಜಿಂಕೆಯನ್ನು ಬೇಟೆ ಮಾಡಿದ ನಂತರ ಅದನ್ನು ಕಂದಕದಿಂದ ಮೇಲೆ ತಂದು ತನ್ನ ಮರಿಗಳಿಗೆ ಉಣಬಡಿಸಿದ್ದು ಬಲು ಆಶ್ಚರ್ಯಕರವಾಗಿತ್ತು. ಅಷ್ಟು ಭಾರದ ಜಿಂಕೆಯನ್ನು ತನ್ನ ಹಲ್ಲಿನಿಂದ ಕಚ್ಚಿ ಹಿಡಿದು ತನ್ನ ಮುಂಭಾಗದ

